ಹೊರಗೆ ಹೆಜ್ಜೆಯಿಟ್ಟಳು, ಬೇಡ ಬೇಡವೆಂದರೂ ಪಕ್ಕದ ಮನೆ ಅಜ್ಜನ ಬಾಯಿ ಕಣ್ಣಿಗೆ ಬಿತ್ತು. ಕೆಂಪಾದ ತುಟಿಗಳ ಮಧ್ಯೆ ಅಲ್ಲಿ ಧ್ಯಾನಸ್ಥ ಮೆಲುಕೊಂದು ಕಂಡದ್ದೇ ಅನುಪಮಾ ಧಡಧಡ ಮೆಟ್ಟಿಲಿಳಿದು ಅಲ್ಲಿಂದ ಓಟಕಿತ್ತಳು. ಅಲ್ಲೇ ಗೇಟಿನಲ್ಲಿ ಮನೆಮನೆಗೆ ಹಾಲು ಹಾಕುವ ಹುಡುಗ ಸೈಕಲ್ ಹಿಡಿದು ನಿಂತಿದ್ದ. ಹಲ್ಲು ಕಚ್ಚಿ ಹಿಡಿದಿದ್ದರೂ ಆತನ ಗಲ್ಲದೊಳಗೆ ಮಾತ್ರ ಏನೋ ಕುಣಿಯುತ್ತಿದ್ದದ್ದು ಕಣ್ಣಿಗೆ ಬೀಳುತ್ತಿದ್ದಂತೆಯೇ ಇನ್ನೂ ಜೋರಾಗಿ ಹೆಜ್ಜೆ ಹಾಕಿದಳು. ಅಲ್ಲಿಂದ ಅವಳಿಗರಿವಿಲ್ಲದೇ ಪ್ರತೀ ದಾರಿ ಹೋಕರ ಬಾಯಿ ಗಮನಿಸುವುದೇ ಆಗಿಹೋಯಿತು.

ನಾಲ್ಕು ಹೆಜ್ಜೆ ಹೋದದ್ದೇ ಪಕ್ಕದ ದೊಡ್ಡ ಅರಳೀ ಮರದ ನೆರಳಲ್ಲಿ ಇರಿಸಿಕೊಂಡ ಮೇಜಿನಲ್ಲಿ, ಕೆಂಡದ ಇಸ್ತ್ರೀ ಮಾಡುತ್ತಿದ್ದ ಪ್ರವೀಣ, ಮುದ್ದೆಯಾದ ಶರ್ಟನ್ನು ಬಿಚ್ಚಿ ಹಾಸುತ್ತ ಗೊಜ್ಜಿದ ತಣ್ಣೀರೇ ಕೊಂಚ ನನಗೂ ಸಿಡಿಯಿತು ಅಂತ ಒಂದು ಕ್ಷಣ ಅನುಪಮಾಳಿಗನ್ನಿಸಿತು. ಆದರೂ ಅವಳ ದೃಷ್ಟಿ ಸೂಕ್ಷ್ಮ ಅವನ ಬಾಯನ್ನೇ ಅಳೆದಿತ್ತು. ಸಣ್ಣಗೆ ತುಟಿಯ ಅಲುಗಾಟ ಬಿಟ್ಟರೆ ಉಳಿದಂತೆ ಅವನ ಮುಖ ಸ್ತಬ್ಧವಾಗಿತ್ತು. ರಸಗವಳವನ್ನೂ ಇಷ್ಟು ಕಲಾತ್ಮಕವಾಗಿ ಅಗಿಯಬಹುದೆಂದು ಅನುಪಮಳಿಗೆ ತಿಳಿದದ್ದು ಆಗಲೇ. ಆದರೆ ಅಷ್ಟರಲ್ಲೇ ಅವಳು ತೊಟ್ಟ ಹಳದೀ ಕುರ್ತಾದ ಬಲ ತೋಳಿಗೆ ಕೆಂಪು ಚುಕ್ಕಿಯ ಚಿತ್ತಾರ ಏರ್ಪಟ್ಟಾಗಿತ್ತು. ಅಯ್ಯೋ ಅನ್ನಿಸಿದರೂ ಮತ್ತೆ ಮತ್ತೆ ಅದನ್ನೇ ನೋಡಿಕೊಳ್ಳುತ್ತ ಸಾಗಿದಳು.

ಮುಂದೆ ಹೋದಂತೆ ಪಕ್ಕದ ಕ್ರಾಸಿನಲ್ಲಿ ಮನೆಯಿದ್ದ ಗೆಳತಿ ಸುಮಾ ಜೊತೆಯಾದಳು. ಅಲ್ಲೇ ಪಾತ್‌ವೇನಲ್ಲಿ ಎಂದಿನಂತೆ ದೂಡುವ ಗಾಡಿಯಲ್ಲಿ ಕೆಂಡದೊಲೆಯ ಮೇಲೆ ಗೋವಿಂಜೋಳ ಸುಟ್ಟು, ಅದಕ್ಕೆ ಉಪ್ಪು ಲಿಂಬು ಖಾರಾಪುಡಿ ಸವರಿ ಮಾರುತ್ತಿದ್ದ ಹುಡುಗ ಕಣ್ಣಿಗೆ ಬಿದ್ದ. ಗೆಳತಿಯರಿಬ್ಬರೂ ಒಂದೇ ಗೋವಿಂಜೋಳ ಕೊಂಡು ಅದರಲ್ಲಿ ಎರಡು ತುಂಡು ಮಾಡಿಸಿ, ಮಡಚಿದ ರದ್ದಿ ಪೇಪರಿನಲ್ಲಿ ಹಿಡಿದುಕೊಂಡು ಕಾಲೇಜಿನ ತನಕ ಎರಡೆರಡೇ ಕಾಳು ಮೆಲ್ಲುತ್ತ ದಾರಿ ಸವೆಸುವ ರೂಢಿ ಮಾಡಿಕೊಂಡಿದ್ದರು.

ಆ ಹುಡುಗನ ದನಿ ಒಮ್ಮೆಯೂ ಕಿವಿಗೆ ಬೀಳದ ಕಾರಣ ಅನುಪಮ ಅವನು ಮೂಕನೆಂದೇ ಭಾವಿಸಿದ್ದಳು. ಇವತ್ತು ಇದ್ದಕ್ಕಿದ್ದಂತೆ ಅವನ ಮುಖದೆಡೆಗೆ ಲಕ್ಷ್ಯ ಹೋಯಿತು. ದವಡೆ ಮಾತ್ರ ಯಾಕೋ ಸಣ್ಣಗೆ ಅಲುಗಾಡುತ್ತಿತ್ತು. ಕಂಡಕಂಡವರ ಬಾಯಿಗಳೆಲ್ಲ ಆ ಕೆಂಪು ರಸಾಯನವನ್ನು ಉತ್ಪಾದಿಸುವ ಫ್ಯಾಕ್ಟರಿಗಳಂತೆಯೇ ಅನುಪಮಳಿಗೆ ಈಗ ಗೋಚರಿಸತೊಡಗಿದವು. ನಾಲ್ಕು ಮಾರು ದೂರವೇ ನಿಂತು ಅರ್ಧ ಗೋವಿಂಜೋಳವನ್ನು ಗೆಳತಿಯಿಂದ ಪಡೆದಳೇನೋ ಸರಿ, ಆದರೆ ಅದನ್ನು ಹಿಂದೆ ಮುಂದೆ ತಿರುಗಿಸಿ ಅನುಮಾನದಿಂದಲೇ ನೋಡಿದಳು. ಅದಕ್ಕೆ ಹಚ್ಚಿದ್ದ ಕೆಂಪು ಖಾರದ ಪುಡಿಯ ಮೇಲೆ ಅವಳ ಗಮನ ಹೋಯಿತು.

ಮುಂದೆ ಹೋದ ಹಾಗೆ ಆಗಸದಿಂದ ಮಳೆ ಜಿನುಗಿದಂತೆ ಭಾಸವಾಯಿತು. ಅನುಪಮಾ ನಿಧಾನ ತಲೆಯೆತ್ತಿ ಮೇಲೆ ನೋಡಿದಳು. ಅಲ್ಲೇ ಪಕ್ಕದಲ್ಲೇ ಏಳುತ್ತಿರುವ ನಾಲ್ಕಂತಸ್ತಿನ ಕಟ್ಟಡದ ಮೇಲೆ ನಿಂತು ಸೆಂಟರಿಂಗ್ ಹೊಡೆಯುತ್ತಿದ್ದ ಮೂರ್ನಾಲ್ಕು ಜನ, ಕೆಂಪು ರಸಾಯನದ ಬೃಹತ್ ಉತ್ಪಾದಕರಂತೆಯೇ ಕಣ್ಣಿಗೆ ಬಿದ್ದರು. ಅಲ್ಲಿಂದ ನಿಲ್ಲದೇ ಓಟಕಿತ್ತ ಅನುಪಮಳ ಹಿಂದೆ ಅವಳ ಗೆಳತಿ ಸುಮಾಗೆ ಓಡಿ ಓಡಿಯೇ ಸಾಕಾಯಿತು.

ಅವರಿಬ್ಬರೂ ಮನೆಯಿಂದ ಕಾಲೇಜಿಗೆ ನಡೆಯುವ ಆ ಹದಿನೈದು ನಿಮಿಷಗಳ ದಾರಿಯಲ್ಲಿ ಅಂಥದೇ ಸುಮಾರು ಎಂಟ್ಹತ್ತು ನಿರ್ಮಾಣ ಹಂತದಲ್ಲಿರುವ ಕಟ್ಟಡಗಳಿದ್ದವು. ಎಲ್ಲ ಕಟ್ಟಡಗಳ ಎದುರು ಹಾದು ಹೋಗುವಾಗಲೂ ಮೇಲೆ ಟಕ್ ಟಕ್ ಧಣ್ ಧಣ್ ಸದ್ದಿನೊಂದಿಗೆ ಪಿಚಕ್ ಪಿಚಕ್ ಉಲಿತ. ರಸ್ತೆಯಲ್ಲಿ ಎಡಬಿಡದೇ ಸಾಗಿರುವ ಬಸ್ಸಿನ ಕಿಟಕಿಯಿಂದಲೂ ಸುಳಿದು ಬರುವ